



(6ನೇ ಪುಟದಿಂದ)

ಒರಿಸ್ಸಾದ ಸಂಭಲ್‌ಪುರ ಜಿಲ್ಲೆ ಮತ್ತು ಪಶ್ಚಿಮ ಬಂಗಾಳದ ಬುರ್ದ್ವಾನ್ ಜಿಲ್ಲೆ ಮರದ ಕೆತ್ತನೆಯ ಸಾಂಪ್ರದಾಯಿಕ ಕಲೆಗೆ ಹೆಸರುವಾಸಿ. ಹಲವು ಶತಮಾನಗಳಿಂದಲೂ ಈ ಎರಡು ಜಿಲ್ಲೆಗಳಲ್ಲಿ ಹಲವು ಪೀಳಿಗೆಗಳು ಮರದ ಕೆತ್ತನೆಗಳಲ್ಲಿ ನಿರತವಾಗಿವೆ. ಸ್ಥಳೀಯ ಹೆಸರಲ್ಲಿ ಗಾಂಬ್ರಿ ಎಂದು ಕರೆಯಲ್ಪಡುವ ಮೆತ್ತನೆಯ ಮರವನ್ನೇ ಇಲ್ಲಿಯ ಜನ ಕೆತ್ತನೆ ಕೆಲಸಕ್ಕೆ ಬಳಸುತ್ತಾರೆ.

ಮರದ ಮೇಲೆ ಪೆನ್ಸಿಲ್‌ನಿಂದ ಸಣ್ಣ ಗೆರೆ ಎಳೆಯುವ ಈ ಕಲಾವಿದರು ತಮಗೆ ಬೇಕಾದ ಆಕೃತಿಗೆ ಮರದ ತುಂಡುಗಳನ್ನು ಒಗ್ಗಿಸುತ್ತಾರೆ. ಬಹಳಷ್ಟು ಗೊಂಬೆಗಳಿಗೆ ಕೃತಕ ಬಣ್ಣ ಹಚ್ಚುವಾಗಲೂ ಅಗತ್ಯ ಬಿದ್ದ ಕಡೆ ಮರದ ಮೂಲ ಬಣ್ಣವನ್ನೇ ಉಳಿಸಿಕೊಳ್ಳುತ್ತಾರೆ. ನೈಸರ್ಗಿಕ ಬಣ್ಣದ ಹೊಳಪು ಕಲಾಕೃತಿಗೆ ವಿಶಿಷ್ಟ ರೂಪು ಕೊಡುತ್ತದೆ. ಕೆಲವೊಮ್ಮೆ ಪೌಡರ್ ಕಲರ್ ಕೂಡಾ ಬಳಸಲಾಗುತ್ತದೆ.

ಮುಖ್ಯವಾಗಿ ದುರ್ಗಾ ಮತ್ತು ಜಗನ್ನಾಥನ ರೂಪ ಇಲ್ಲಿನ ಕಲಾವಿದರ ಅಚ್ಚುಮೆಚ್ಚಿನ ವಿಷಯ. ಅದು ಸಾಕಷ್ಟು ಜನಪ್ರಿಯ ಕೂಡಾ. ಆದರೆ ಇತ್ತೀಚಿನ ದಿನಗಳಲ್ಲಿ ಬಾವಲಿಗಳ ಪ್ರತಿಕೃತಿ ಸಹಿತ ವಿಭಿನ್ನ ಕಲಾಕೃತಿಗಳಿಗೆ ಬೇಡಿಕೆ ಹೆಚ್ಚಾಗಿರುವುದು ಕುತೂಹಲಕರ. ಬಹುತೇಕ ಮಧ್ಯಮ ವರ್ಗಗಳವರ ಮನೆಗಳಲ್ಲಿ ಇಲ್ಲಿನ ಮರದ ಗೊಂಬೆಗಳಿಗೆ ಶಾಶ್ವತ ಸ್ಥಾನವಿದೆ.